# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ.ಬಿ12(1)ಪಿಆರ್/142/04-05.
11-12

ಆಯುಕ್ತರವರ ಕಛೇರಿ,
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 27/1/12

## ಕಛೇರಿ ಆದೇಶ

ವಿಷಯ: ಸರ್ಕಾರವು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಪೌರಾಡಳಿತ ಇಲಾಖೆಯ 12 ಮಂದಿ ಖಾಯಂ ಕರವಸೂಲಿಗಾರರುಗಳಲ್ಲಿ ನೇಮಕಾತಿಯ ಬಗ್ಗೆ ನ್ಯೂನತೆ ಕಂಡುಬಂದಿದ್ದ 5 ಮಂದಿ ಕರವಸೂಲಿಗಾರರುಗಳನ್ನು ದಿನಾಂಕ: 16/01/2007 ರಿಂದ ದಿನಾಂಕ: 01/01/2011ಕ್ಕೆ ಇರುವಂತೆ ಪ್ರಚುರಪಡಿಸಲಾಗಿರುವ ಕಂದಾಯ ವಸೂಲಿಗಾರರ ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ನಡವಳಿಗಳ ಆದೇಶ ಸಂಖ್ಯೆ:ನಅಇ 341 ಎಂಎನ್‌ವೈ 2007, ದಿನಾಂಕ: 10-01-2011.
2. ವಿಶೇಷ ಆಯುಕ್ತರು (ಆಡಳಿತ) ರವರ ಅಧ್ಯಕ್ಷತೆಯಲ್ಲಿ ದಿನಾಂಕ: 19-03-2011 ರಂದು ನಡೆದ ಸಭೆಯ ನಡವಳಿಗಳು.
3. ಈ ಕಛೇರಿ ಸಮಸಂಖ್ಯೆಯ ಕಛೇರಿ ಆದೇಶ ದಿನಾಂಕ: 12-05-2011.
4. ಈ ಕಛೇರಿ ಸಮಸಂಖ್ಯೆಯ ಕಛೇರಿ ಆದೇಶ ದಿನಾಂಕ: 30-09-2011.
5. ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ದಿನಾಂಕ: 03-01-2012 ರಂದು ನಡೆದ ಸಭೆಯ ನಡವಳಿಗಳು.

* * * * *

ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಬೆಂಗಳೂರು ನಗರದ ಸುತ್ತಮುತ್ತಲಿನ 7 ನಗರಸಭೆಗಳು 1 ಪುರಸಭೆಯ ಒಟ್ಟು 289 ಮಂದಿ ವಿವಿಧ ವೃಂದಗಳ ಖಾಯಂ ಪೌರಸೇವಾ ನೌಕರರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸೇವೆಯಲ್ಲಿ ದಿನಾಂಕ: 16/01/2007 ರಿಂದ ಜಾರಿಗೆ ಬರುವಂತೆ ಉಲ್ಲೇಖ-(1)ರ ನಡವಳಿಯನ್ವಯ ವಿಲೀನಗೊಳಿಸಿ ಆದೇಶಿಸಿದ್ದ ಮೇರೆಗೆ ಸರ್ಕಾರವು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಪೌರಾಡಳಿತ ಇಲಾಖೆಯ 12 ಮಂದಿ ಖಾಯಂ ಕರವಸೂಲಿಗಾರರಲ್ಲಿ ನೇಮಕಾತಿಯ ಬಗ್ಗೆ ನ್ಯೂನತೆ ಕಂಡುಬಂದಿರುವ 5 ಮಂದಿ ಕರವಸೂಲಿಗಾರರುಗಳನ್ನು ಹೊರತುಪಡಿಸಿ, ಉಳಿದ 7 ಮಂದಿ ಕರವಸೂಲಿಗಾರರನ್ನು ಪಾಲಿಕೆಯ ಕಂದಾಯ ವಸೂಲಿಗಾರರುಗಳೊಂದಿಗೆ ಸೇರ್ಪಡಿಸಿಕೊಂಡು ದಿನಾಂಕ; 16/01/2007 ರಿಂದ ದಿನಾಂಕ: 01/01/2011ಕ್ಕೆ ಇರುವಂತೆ, ಉಲ್ಲೇಖ (4)ರ ರೀತ್ಯ ಕಂದಾಯ ವಸೂಲಿಗಾರರ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲಾಗಿರುತ್ತದೆ.

ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಪೌರಾಡಳಿತ ಇಲಾಖೆಯ 12 ಮಂದಿ ಖಾಯಂ ಕರವಸೂಲಿಗಾರರಲ್ಲಿ ನೇಮಕಾತಿಯ ಬಗ್ಗೆ ನ್ಯೂನತೆ ಕಂಡುಬಂದಿರುವ 5 ಮಂದಿ ಕರವಸೂಲಿಗಾರರುಗಳು ನೇಮಕಾತಿಯ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿದ್ದ ಮೇರೆಗೆ ಸದರಿ ನೌಕರರುಗಳನ್ನು ಉಲ್ಲೇಖ (4)ರ ರೀತ್ಯ ಹೊರಡಿಸಿರುವ ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡಿಸಲು ಉಲ್ಲೇಖ (5)ರ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಪೌರಾಡಳಿತ ಇಲಾಖೆಯ 12 ಮಂದಿ ಖಾಯಂ ಕರವಸೂಲಿಗಾರರಲ್ಲಿ ಕೈಬಿಟ್ಟಿದ್ದ 5 ಮಂದಿ ಕರವಸೂಲಿಗಾರರುಗಳನ್ನು ಈ ಕೆಳಕಂಡಂತೆ ಉಲ್ಲೇಖ (4)ರ ಕಂದಾಯ ವಸೂಲಿಗಾರರ ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡಿಸಿ ಆದೇಶ ಹೊರಡಿಸಿದೆ.

| ಕ್ರ. ಸಂ | ದಿನಾಂಕ: 30/09/2011ರ ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡಿಸಬೇಕಾಗಿರುವ ಕ್ರಮ ಸಂಖ್ಯೆ | ನೌಕರರ ಹೆಸರು | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಹುದ್ದೆ ಧಾರಣೆ ಮಾಡಿದ ದಿನಾಂಕ | ವಿದ್ಯಾರ್ಹತೆ | ಇಲಾಖಾ ಪರೀಕ್ಷೆಗಳು | ಪ್ರವರ್ಗ | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1. | 5ಎ | ಶ್ರೀ ಎಂ.ನಾರಾಯಣ ಸ್ವಾಮಿ | 04/02/1969 | 01/07/1991 | 01/07/1991 | ಪಿ.ಯು.ಸಿ. | — | ಸಾಮಾನ್ಯ | ಪೌರಾಡಳಿತ ಇಲಾಖೆ. ಸದರಿಯವರ ನೇಮಕಾತಿ ಬಗ್ಗೆ ಸರ್ಕಾರದಿಂದ ಹೊರಡಿಸಬಹುದಾದ ಆದೇಶದ ಷರತ್ತಿಗೊಳಪಟ್ಟಿದೆ |
| 2. | 70ಎ | ಶ್ರೀ ವೆಂಕಟಯ್ಯ | 20/05/1964 | 01/09/1987 | 01/09/1997 | ಎಸ್.ಎಸ್.ಎಲ್.ಸಿ. | — | ಸಾಮಾನ್ಯ | ಪೌರಾಡಳಿತ ಇಲಾಖೆ |
| 3. | 80ಎ | ಶ್ರೀ ಹನುಮಂತಯ್ಯ | 01/06/1960 | 30/05/1988 | 01/06/1998 | ಎಸ್.ಎಸ್.ಎಲ್.ಸಿ. | — | ಪ.ಜಾತಿ | ಪೌರಾಡಳಿತ ಇಲಾಖೆ |
| 4. | 99ಎ | ಶ್ರೀ ಎಲ್.ಎಸ್ ಗಂಗರಾಜು | 04/02/1962 | 21/03/1988 | 21/03/1999 | ಎಸ್.ಎಸ್.ಎಲ್.ಸಿ. | — | ಸಾಮಾನ್ಯ | ಪೌರಾಡಳಿತ ಇಲಾಖೆ |
| 5. | 99ಬಿ | ಶ್ರೀ ಟಿ.ಗೋಪಾಲ್ | 10/12/1970 | 01/04/1989 | 01/04/1999 | ಎಸ್.ಎಸ್.ಎಲ್.ಸಿ. | — | ಸಾಮಾನ್ಯ | ಪೌರಾಡಳಿತ ಇಲಾಖೆ |

ಜಂಟಿ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು : ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರು, ಮಾನ್ಯ ಆಡಳಿತ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ನಾಯಕರುಗಳ ಅವಗಾಹನೆಗೆ ತರಲು ಕೋರಿದೆ.
: ವಲಯ ಅಪರ / ಜಂಟಿ ಆಯುಕ್ತರು ರವರುಗಳಿಗೆ ಕಳುಹಿಸಿದೆ.
: ಉಪ ಆಯುಕ್ತರು (ಕಂದಾಯ) / (ಮಾರುಕಟ್ಟೆ) ರವರುಗಳಿಗೆ ಕಳುಹಿಸಿದೆ.
: ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕೋರಿದೆ.
: ಎಲ್ಲಾ ಸಹಾಯಕ ಕಂದಾಯ ಅಧಿಕಾರಿ ರವರುಗಳಿಗೆ ಕಳುಹಿಸುತ್ತಾ, ಕಛೇರಿ ನಾಮಫಲಕಗಳಲ್ಲಿ ಪ್ರಚುರ ಪಡಿಸಲು ಸೂಚಿಸಲಾಗಿದೆ.
: ಕಛೇರಿ ಪ್ರತಿ.